## ಉಪ್ಪಿನ ಬಣವೆಗಳು...!

ಇತ್ತೀಚೆಗೆ ಮುಂಬಯಿ ಬಳಿಯ ಭಾಂಡುಪ್ ಉಪ್ಪು ತಯಾರಿಕಾ ಪ್ರದೇಶಕ್ಕೆ (Salt Pan) ಭೇಟಿ ನೀಡಿದಾಗ ಬೃಹತ್ ಗಾತ್ರದ ಬಣವೆಗಳು ಗಮನ ಸೆಳೆದವು. ಮಲೆನಾಡಿನಲ್ಲಿ ಭತ್ತ ಬೆಳೆಗಾರರು ಭತ್ತವನ್ನು ಕೊಯ್ದ ಬಳಿಕ ಹುಲ್ಲನ್ನು ಒಟ್ಟುಮಾಡಿ ಬಣವೆ ಒಟ್ಟುವ ರೀತಿಯಲ್ಲಿಯೇ ಇದ್ದವು. ಆದರೆ ಇವು ಉಪ್ಪಿನ ಬಣವೆಗಳು! ಉಪ್ಪು ತಯಾರಿಸಿದ ಬಳಿಕ ಅದನ್ನು ಗುಪ್ಪೆ ಹಾಕಿ ಬಿಸಿಲು, ಇಬ್ಬನಿ ಮತ್ತು ದೂಳಿನಿಂದ ರಕ್ಷಿಸಲು ಅದರ ಮೇಲೆ ಹುಲ್ಲನ್ನು ಮುಚ್ಚುವ ಪದ್ಧತಿಯಿದೆ. ಅವು ನೋಡಲು ಹುಲ್ಲಿನ ಬಣವೆಯಂತೆಯೇ ಕಾಣುತ್ತವೆ.

—ಶ್ರೀರಂಗ ವೆಂ.ಕಟ್ಟಿ ಯಲ್ಲಾಪುರ





## ಮಕ್ಕಳಿಗೆ ಕೂವೆ

ಇಂದು ಚಿಕ್ಕ ಮಕ್ಕಳಿಗೆ ತಿನ್ನಿಸಲು ಸಿದ್ಧ ಆಹಾರ ವಸ್ತುಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಆದರೆ ಹಿಂದೆ ಗ್ರಾಮೀಣ ಭಾಗಗಳಲ್ಲಿ ಮನೆಯಲ್ಲೇ ಹಿರಿಯರು ಮಕ್ಕಳಿಗೆ ಆಹಾರ ಸಿದ್ಧ ಮಾಡುತ್ತಿದ್ದರು. ಇವುಗಳಲ್ಲಿ ಕೂವೆ ಗಿಡದ ಗಡ್ಡೆ ಕೂಡಾ ಒಂದು.

ಅರಿಶಿನ ಗಿಡದ ರೀತಿ ಪರಿಮಳ ಹೊಂದಿರುವ ಕೂವೆ ಗಿಡ ಕಳೆ ಗಿಡವಾಗಿ ಕರಾವಳಿ ಭಾಗದ ಬೆಳ್ತಂಗಡಿ ಸುತ್ತಮುತ್ತಲ ಪ್ರದೇಶಗಳಲ್ಲಿ ಕಾಣಲು ಸಿಗುತ್ತದೆ. ಇದು ಮಾರ್ಚ್ ಏಪ್ರಿಲ್ ಆಸುಪಾಸಿನಲ್ಲಿ ಗುಲಾಬಿ ಬಣ್ಣದ ಆಕರ್ಷಕ ಹೂ ಬಿಡುತ್ತದೆ. ಇದರ ಗಡ್ಡೆಯನ್ನು ಬಿಸಿಲಿಗೆ ಒಣಗಿಸಿ ಬಳಿಕ ಪುಡಿ ಮಾಡಿ ಅದನ್ನು ಹಾಲಿನ ಜೊತೆಗೆ ಬೆರೆಸಿ ಪೇಯದ ರೀತಿ ಮಕ್ಕಳಿಗೆ ನೀಡಲಾಗುತ್ತಿತ್ತು ಎಂದು ಹಿರಿಯರು ಈಗಲೂ ನೆನಪಿಸಿಕೊಳ್ಳುತ್ತಾರೆ.

—ಅರುಣ್ ಕಿಲ್ಲೂರು

## ಕಲಶರೂಪದ ಕಲಾತ್ಮಕ ಬಾವಿಕಟ್ಟೆ

ಸಾಮಾನ್ಯವಾಗಿ ಬಾವಿಕಟ್ಟೆಯ ಮೇಲೆ ಸರಳ ಗೋಡೆಯ ಆವರಣವನ್ನು ರಕ್ಷಣಾತ್ಮಕವಾಗಿ ನಿರ್ಮಿಸಲಾಗುತ್ತದೆ. ಆದರೆ ದ.ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ ಬಡಗನ್ನೂರಿನ 'ದೇಯಿ ಬೈದೈತಿ ಕೋಟಿ ಚೆನ್ನಯ' ಮೂಲಸ್ಥಾನವಾದ ಗೆಜ್ಜೆಗಿರಿ ನಂದನಬಿತ್ತಿಲ್ ಎಂಬ ಕ್ಷೇತ್ರದಲ್ಲಿ ನಿರ್ಮಿಸಲಾಗಿರುವ ಈ ತೀರ್ಥಬಾವಿಗೆ ಕಲಾತ್ಮಕ ಬಾವಿಕಟ್ಟೆಯ ರೂಪು ನೀಡಲಾಗಿದ್ದು ಭಕ್ತಾದಿಗಳನ್ನಿದು ಆಕರ್ಷಿಸುತ್ತಿದೆ. ತುಳುನಾಡಿನ ಚಾರಿತ್ರಿಕ ದೈವೀ ಪುರುಷರಾದ ಕೋಟಿ– ಚೆನ್ನಯರ ಗರೋಡಿಯು ಅವರು ಅವತಾರವೆತ್ತಿದ ಪುಣ್ಯಭೂಮಿಯಲ್ಲಿ ಇತ್ತೀಚೆಗೆ ನವೀಕರಿಸಲಾಗಿದೆ. ಬ್ರಹ್ಮಕಲಶೋತ್ಸವದ ನಿಮಿತ್ತ ನವೀಕೃತಗೊಂಡ ಮೂಲಸ್ಥಾನದಲ್ಲಿ ಸದ್ರಿ ತೀರ್ಥಬಾವಿ ಪಾವಿತ್ರ್ಯತೆಯ ಜೊತೆಗೆ ಕಲಶರೂಪದ ಕಟ್ಟೆಯೊಂದಿಗೆ ಕಲಾತ್ಮಕವೂ ತಾನಾಗಿ ಭಕ್ತಾದಿಗಳ ಗಮನ ಸೆಳೆಯುತ್ತಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

